ನಂ. 6. ತಾರೀಖು 20ನೇ ಆಗಸ್ಟು 1885.

ಹೊಳೆನರಸೀಪುರದ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ದೇವಾರಸಾಗಿ ಇರತಕ್ಕ ಕೆಳಗೆ ವಿವರಸೋಣಾದ ದಸ್ತಾವೇಜನ್ನ ಹಾಜರ್ಮಾಡಿದವನೆ ಆಗಲಿ ಅಥವಾ ವಾಪಸು ಪಡಿಯಲಿಕ್ಕೆ ಅಧಿಕಾರ ಹೊಂದಿದವನೆ ಆಗಲಿ ಈ ನೋಟಿಸ್ ತಾರೀಖು ಲಾಗಾಯಿತು ಒಂದು ತಿಂಗಳುವಳಗಾಗಿ ಸಬ್ ರಿಜಿಸ್ಟ್ರಾರವರ ರೂಬರೂ ಹಾಜರಾಗಿ ಅದನ್ನು ವಾಪಸು ತೆಗದುಕೊಳ್ಳಬೇಕು. ತಪ್ಪಿದರೆ 1877ನೇ ಇಸವಿ 3ನೇ ನಂಬರ ರಿಜಿಸ್ಟ್ರೇಷ್ ಆಕ್ಟು 85ನೇ ಸೆಕ್ಷನ್ ಅನುಸರಿಸಿ ನಾಶಪಡಿಸಲ್ಪಡುವದು.

| ನಂಬರು. | ದಸ್ತಾವೇಜು ಬರದುಕೊಟ್ಟವನ ಹೆಸರು ಮತ್ತು ವಾಸಸ್ಥಳ. | ಬರಸಿಕೊಂಡವನ ಹೆಸರು ಮತ್ತು ವಾಸಸ್ಥಳ. | ರಿಜಿಸ್ಟ್ರಿಗೆ ಹಾಜರಾದ ತಾರೀಖು. | ರಿಜಿಸ್ಟ್ರಿಯ ತಾರೀಖು. | ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು. |
|---|---|---|---|---|---|
| 28<br>83—84 | ಹೊಳೆನರಸೀಪುರ ಕಸಬಾದಲ್ಲಿರುವ ಕರ್ನಿಸ್ ಕೃಷ್ಣಾಚಾರ್ಯರ ಮಗ ಮೂಧ್ವ ಬ್ರಾಹ್ಮಣ ಲಕ್ಷ್ಮಿನಾರಾಯಣಾಚಾರ್ಯರು ಶೇಷಗಿರಿರಾಯರ ಮಗಣ ವೈದಿಕವೃತ್ತಿಯಿಂದ ಜೀವಿಸುವ ಜಗನ್ನಾಥಾಚಾರ್ಯ | ಹೊಳೆನರಸೀಪುರದಲ್ಲಿರುವ ಮೂಧ್ವ ಬ್ರಾಹ್ಮಣ ಲಕ್ಷ್ಮಿನಾರಾಯಣಾಚಾರ್ಯರ ಮಗ ವೈದಿಕವೃತ್ತಿಯಿಂದ ಜೀವಿಸುವ ಯಲ್. ಅಂಣಾಜೆರಾವು | ೧—೬—೮೫ | ೨—೬—೮೫ | 1 ಹೊಳೆನರಸೀಪುರದ ಗ್ರಾಮದಲ್ಲಿರುವದು, ರಾಮಾಚಾರ್ಯರ ವಸಿಗೆ ಪೂರ್ವ ಪೋಜಿಗೆ ಪಶ್ಚಿಮ ಕೋಟೆಗೆ ದಕ್ಷಿಣ ಬೀದಿಗೆ ಉತ್ತರ ಈ ಮಧ್ಯೆ 749ನೇ ನಂ, ಹಂಚಿನ ಮನೆ ಅಂಕಣ 12<br>2 ಪಳಿಕೋಟೆ ಹೊಲ್ತನಾಲ ನಾಗ್ಯದ ಹಂತದಲ್ಲಿ ಪೂರ್ವಕ್ಕೆ ನಾಲಾ ಯೇರಿ ಪಶ್ಚಿಕ್ಕೆ ಮಿರಿಜಾಸಾಬರ ಗದ್ದೆ ದಕ್ಷಿಣಕ್ಕೆ ಸರಕಾರದ ಪಾಳು ಉತ್ತರಕ್ಕೆ ನಾಲಾ ಯೇರಿ ಈ ಮಧ್ಯೆ ತರೀ ಮಾಜೆ ನಂಬರ 1ನೇ ೃತೆ ಗದ್ದ ಬೀಜವರೀ ೮೦॥೦ ಕೆಂದಾಯ ೭। ಈ ಬಾಬತು ಜಮೀನು ಮನೆ ಸಮ ೭೦೦ ರೂಪಾಯಿಗೆ ಭೋಗ್ಯ ಯೇಳು ವರುಷದ ವರಿಗು ಅನುಭವಿಸಿಕೊಂಡು ಬರಜೇಕು ನಂತರ ಮೊಬಲಗು ಕೊಟ್ಟು ಸ್ಥಿತಿ ಬಿಡಿಸಿಕೊಳ್ಳುತ್ತೆನೆಂದು |

ಅಬ್ದುಲ್‌ಖಾದರ್,
ರಿಜಿಸ್ಟ್ರಾರ್.

## ನಗರ ಡಿವೀಜ್ಞ.

### ನಗರ್ ಡಿವೀಜ್ಞ ಡಿ॥ ಜಡ್ಜ್ರೀಯವರ ಕೋರ್ಟ್‌ನಲ್ಲಿ.

1885ನೇ ಇಸವಿ ಅರ್ಜೀ ನಂಬರ್ 70.

ಮೃತಪಟ್ಟ ಗಂಗಮ್ಮನ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ ಹಲಮುಡಿ ರುದ್ರಯ್ಯ ಮೃತಪಟ್ಟ ಸದರೀ ಗಂಗಮ್ಮನು ತನಿಗೆ ಚಿಕ್ಕಪ್ಪನ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಚಿಕ್ಕಮಗಳೂರು ತಾಲ್ಲೂಕು ಇಂದಾವರ ಸ್ಥಳದ ಹಲಮುಡಿ ರುದ್ರಯ್ಯನು ಸದರೀ ಇಂದಾವರದ ವಾಸಸ್ಥಳಾಗಿ ಮೃತಪಟ್ಟ ಗಂಗಮ್ಮನ ಜಿಂದಗಿಬಗ್ಯಾಗಿ ಬರತಕ್ಕ 150 ರೂಪಾಯಿಗಳ ಸಾಲವನ್ನು ವಸೂಲ್‌ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರೆಗೆ ಸರ್ಟಿಫಿಕೇಟ್ ಬಗ್ಯೆ ಈ ಕೋರ್ಟ್‌ಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಹಲಮುಡಿ ರುದ್ರಯ್ಯನ ಅರ್ಜೀಯನ್ನು 1885ನೇ ಇಸವಿ ಸೆಪ್ಟಂಬರ್ ತಿಂಗಳು ತಾರೀಖು 29ರಲ್ಲು ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗಂಗಮ್ಮನ ಆಸ್ತಿಗೆ ಹಕ್ಕುದಾರರಾದ ವಿಶ್ವರೂ ಈ ಕೋರ್ಟ್‌ನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1885ನೇ ಇಸವಿ ಆಗಸ್ಟು ತಿಂಗಳು 18ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ದಸ್ತಖತ್‌ನಿಸೀಕೊಡೋಣಾಗಿಧೆ.